**ದಿನಾಂಕಃ 31.10.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲುಃ** D-2(a to f) ರವರು ಗೈರುಹಾಜರಿದ್ದು, ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು. D-1, 3 to 7, 9 to 12 ರವರು ಏಪಕ್ಷೀಯವಾಗಿರುತ್ತಾರೆ.

**ಪಾಟೀಸವಾಲುಃ** 13 ನೇ ಪ್ರತಿವಾದಿಯವರು 16 ನೇ ಪ್ರತಿವಾದಿಯವರು ಮಾಡುವ ಪಾಟೀಸವಾಲನ್ನು ಅಳವಡಿಸಿಕೊಳ್ಳಲು ಅನುಮತಿ ಕೋರಿರುತ್ತಾರೆ.

**ಪಾಟೀಸವಾಲುಃ 14 ನೇ ಪರ ವಕೀಲರಾದ ಶ್ರಿ. ಆರ್ ಆರ್ ಎನ್ ವಕೀಲರಿಂದಃ**

Misc 8/2012 ರಲ್ಲಿ ನಾನು ಸಾಕ್ಷ್ಯ ನೀಡಿದ್ದೇನೆ, ಈಗ ಅದು ನೆನಪಿಲ್ಲ. Misc 8/2012 ರಲ್ಲಿ ಸಾಕ್ಷ್ಯ ನೀಡಿದಾಗ ರೂ. 501/- ನ್ನು ನಾನು ನೀಡಿಲ್ಲ ಎಂದು ಹೇಳಿದ್ದೆ ಎಂದರೆ, ಹಣ ನೀಡಿದ್ದೇನೆ ಅದೇ ರೀತಿ ಹೇಳಿದ್ದೇನೆ. ಕನ್ನಡ ಓದಲು ಬರುವುದಿಲ್ಲ. ಸಾಕ್ಷಿಗೆ Misc 8/2012 ರಲ್ಲಿ ನೀಡಿರುವ ಸಾಕ್ಷ್ಯದ ಭಾಗವಾದ "ಟ್ರಸ್ಟ ಡೀಡನಲ್ಲಿ ಹೇಳಿರುವ ಮೂಲಧನವನ್ನು ಯಾವುದಾದರೂ ಬ್ಯಾಂಕಿನಲ್ಲಿ ಠೇವಣಿ ಇಟ್ಟಿದೇನೋ ಇಲ್ಲವೋ ಗೊತ್ತಿಲ್ಲ. ಮೂಲಧನ ಶೇಖರಣೆ ಬಗ್ಗೆ ನಾನು ಯಾವುದೇ ವಂತಿಗೆ ಹಣ ನೀಡಿರುವುದಿಲ್ಲ" ಓದಿ ಹೇಳಿದಾಗ , ಸಾಕ್ಷಿಯು ಆ ರೀತಿ ಹೇಳಿಲ್ಲ, ಮೂಲಧನ ನೀಡಿದ್ದೇನೆ ಎಂದು ಹೇಳಿದ್ದೇನೆ ಎಂದು ಹೇಳುತ್ತಾರೆ. ಈಗ ತೋರಿಸಿದ ದಾಖಲೆಯಲ್ಲಿರುವ ಸಹಿ ನನ್ನದೆ. ಸದರಿ ನನ್ನ ಸಹಿ ಇಂಗ್ಲೀಷ್ ನಲ್ಲಿ ಇದೆ. ಸಾಕ್ಷಿಯು Misc 8/2012 ರಲ್ಲಿ ನೀಡಿದ ಸಾಕ್ಷ್ಯವನ್ನು ನಿ.ಪಿ 1 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿ.ಪಿ 1(ಎ) ಎಂದು ಗುರುತಿಸಲಾಯಿತು. ಅದರಲ್ಲಿನ ಮೇಲೆ ಹೇಳಿದ ಪಾಟೀಸವಾಲಿನ ಭಾಗವನ್ನು ನಿಪಿ. 1(ಬಿ) ಎಂದು ಗುರುತಿಸಲಾಯಿತು. ಬೆಂಗಳೂರಿನಲ್ಲಿ ಸಲ್ಲಿಸಿದ writ ಪಿಟಿಶನ್ ಬಗ್ಗೆ ಮಾಹಿತಿ ಇದೆ. ಸದರಿ writ ನಲ್ಲಿ ನಾನು

ಪಕ್ಷಗಾರನಾಗಿದ್ದೆ. ಬೋಗಾದಿಯ ಮಾದಯ್ಯ ಯಾರೆಂದು ಗೊತ್ತಿಲ್ಲ. ಪಟೇಲ್ ಮಲ್ಲಪ್ಪನವರ ಮಗ ಎಮ್ ನಟರಾಜ ಎಂದರೆ, ಹಿನಕಲ್ ನ ವಾಸಿ. WP 30108/2000 ದಲ್ಲಿ ಏನು ತೀರ್ಮಾನ ಆಗಿದೆ ಎಂದರೆ, ಹೈ ಕೋರ್ಟನಿಂದ ಕಳಿಸಿದ್ದಾರೆ ಅಷ್ಟೆ ಗೊತ್ತು. ಮಾದಯ್ಯ ಮತ್ತು ನಟರಾಜ ಹಾಕಿದ WP 30108/2000 ವಜಾ ಆಗಿದೆ ಎಂದರೆ , ಗೊತ್ತಾಗುವುದಿಲ್ಲ. 2 ನೇ ಪ್ರತಿವಾದಿಯವರ ಪರ land reforms ನಲ್ಲಿ ತೀರ್ಪಾದ ನಂತರ ಅದನ್ನು ಪ್ರಶ್ನಿಸಿ ಉಚ್ಚ ನ್ಯಾಯಾಲಯಕ್ಕೆ ಹೋಗಿದ್ದೇವೋ ಎಂದರೆ , ಅರ್ಜಿಯನ್ನು ಹಾಕಿಲ್ಲ. ಸಾಕ್ಷಿ ಹೇಳುತ್ತಾರೆ 2 ನೇ ಪ್ರತಿವಾದಿಯವರು ಗ್ರಾಮಸ್ಥರಿಗೆ ಬಿಟ್ಟುಕೊಡುತ್ತೇವೆ ಎಂದು ಹೇಳಿದ್ದರಿಂದಲೇ WP 30108/2000 ನ್ನು ಹಿಂದೆ ಕಳುಹಿಸಿದ್ದಾರೆ. WP 30108/2000 ರಲ್ಲಿರುವ ಮಾದಯ್ಯ ಮತ್ತು ನಟರಾಜರವರಿಗೆ ಯಾವುದೇ ಹಿತಾಸಕ್ತಿ ಇರುವುದಿಲ್ಲ ಹಾಗೂ 8 ವರ್ಷದ ನಂತರ ಸದರಿ writ ನ್ನು ಸಲ್ಲಿಸಲಾಗಿದೆ ಎಂಬ ಕಾರಣಗಳಿಂದ ವಜಾ ಮಾಡಲಾಗಿದೆ ಎಂದರೆ ಸರಿಯಲ್ಲ. ಮಾದೇಗೌಡನ ಮಗ ಎಮ್ ಪುಟ್ಟೆಗೌಡನ ಹೆಸರು ಟ್ರಸ್ಟ ಡೀಡನಲ್ಲಿ ಇದೆ. ಅವರನ್ನು ಈ ದಾವೆಯಲ್ಲಿ ಸೇರಿಸಿಲ್ಲ. ಸೇರಿಸಲು ನಮಗೇನು ತೊಂದರೆ ಇಲ್ಲ. 14 ನೇ ಪ್ರತಿವಾದಿಯ ಹೆಸರಿಗೆ ಕ್ರಯವಾದ ಸ್ವತ್ತಿನ ಖಾತಾ ಅವರ ಹೆಸರಿನಲ್ಲೆ ಇದೆ ಎಂದರೆ ನಿಜ. ಕಂದಾಯ ಕೂಡ ಅವರೆ ಕಟ್ಟುತ್ತಿದ್ದಾರೆ ಎಂದರೆ,ಯಾರು ಕಟ್ಟುತ್ತಿಲ್ಲ. ದಾವಾ ಸ್ವತ್ತಿನಲ್ಲಿರುವ ಕೆಲವು ಸ್ವತ್ತುಗಳು ರಿಂಗ್ ರೋಡಿಗೆ ಸ್ವಾಧೀನ ಪಡಿಸಿಕೊಂಡಿದ್ದಾರೆ ಎಂದರೆ, 2 ನೇ ಪ್ರತಿವಾದಿ ಮಾರಾಟ ಮಾಡುವುದಕ್ಕೆ ಪೂರ್ವದಲ್ಲಿ ಹೋಗಿದೆ , ಅದರ ಪರಿಹಾರವನ್ನು ಮಾದೇಗೌಡರು, ಪುಟ್ಟೆಗೌಡರು, ದೊಡ್ಡಲಿಂಗೇಗೌಡರು ಬ್ಯಾಂಕಿಗೆ ಹಾಕಿದ್ದಾರೆ. ಈ ಕೇಸಿನಲ್ಲಿ ಮೂಡಾದವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ. ಅವಾರ್ಡ 2 ನೇ ಪ್ರತಿವಾದಿ ಹೆಸರಿಗೆ ಆಗಿದೆ ಎಂದರೆ, 2 ನೇ ಪ್ರತಿವಾದಿಯವರು ಮೇಲೆ ಹೇಳಿದ 3 ಜನರ ಹೆಸರಿನಲ್ಲಿ ಗ್ರಾಮದವರ

ಹೆಸರಿನಲ್ಲಿ ಹಾಕಿ ಪರಿಹಾರ ಪಡೆದು ಕೊಂಡಿದ್ದಾರೆ. ಪರಿಹಾರದ ಚೆಕ್ 2 ನೇ ಪ್ರತಿವಾದಿ ಹೆಸರಿಗೆ ಬಂದಿದೆ. 14 ನೇ ಪ್ರತಿವಾದಿಯು ಕ್ರಯವಾದ ನಂತರ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಟ್ರಸ್ಟ ಡೀಡ ನಿಪಿ. 30 ಅಸ್ತಿತ್ವದಲ್ಲಿ ಇಲ್ಲ ಎಂದರೆ ಸರಿಯಲ್ಲ. ನಿಪಿ. 30 ಆಗುವುದಕ್ಕೆ ಪೂರ್ವದಲ್ಲಿ ದಾವಾಸ್ವತ್ತುಗಳು ಮಾರಾಟ ಆಗಿದ್ದವು ಎಂದರೆ ಸರಿಯಲ್ಲ. ದಾವಾಸ್ವತ್ತನ್ನು ಉಳುಮೆ ಮಾಡುತ್ತಿದ್ದ ಬಗ್ಗೆ ಮತ್ತು ಆದಾಯ ಬಂದ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ನೀಡಿದ್ದೇವೊ ಎಂದರೆ, ಉಳುಮೆ ಬಗ್ಗೆ ದಾಖಲಾತಿ ನೀಡಲು ಬರುವುದಿಲ್ಲ , ಬಂದ ಆದಾಯವನ್ನು ಅದಕ್ಕೆ ಖರ್ಚು ಮಾಡುತ್ತಿದ್ದೆವು. land tribunal ನಲ್ಲಿ ಆದೇಶವು ವೈಯಕ್ತಿಕವಾಗಿ 2 ನೇ ಪ್ರತಿವಾದಿ ಹೆಸರಿಗೆ ಆಗಿದೆ, ನಾನು ಹೇಳಿದಂತೆ ಊರಿನ ಪರವಾಗಿ ಅವರ ಹೆಸರಿಗೆ ಆಗಿಲ್ಲ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯಿಂದ ದಾವಾಸ್ವತ್ತುಗಳನ್ನು ಖರೀದಿ ಮಾಡಿದ ವ್ಯಕ್ತಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಟ್ರಸ್ಟ ಇತ್ತು ಎಂದು ಹೇಳುತ್ತಿದ್ದೇವೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಜಮೀನು ಬಿಟ್ಟುಕೊಡಬೇಕೆಂದು ಪರಿಹಾರ ಕೇಳಿದ್ದೇವೆ. ಟ್ರಸ್ಟಗೆ ಸಂಬಂಧಪಟ್ಟಂತೆ ಯಾವುದೇ ಪರಿಹಾರ ಕೋರಿಲ್ಲ, ಜಮೀನು ಬಿಟ್ಟುಕೊಡುವಂತೆ ಕೇಳಿದ್ದೇವೆ. 2 ನೇ ಪ್ರತಿವಾದಿಯಿಂದ ಲೆಕ್ಕ ಪತ್ರವನ್ನು ಕೊಡಬೇಕೆಂದು ಈ ದಾವೆಯಲ್ಲಿ ಕೇಳಿದ್ದೇವೆ. ದಾವೆಯಲ್ಲಿ ಹೇಳಿದಷ್ಟು ದೇವಸ್ಥಾನಗಳು ದಾವಾಸ್ವತ್ತಿನಲ್ಲಿ ಇಲ್ಲ ಎಂದರೆ ಸರಿಯಲ್ಲ.

**ಪಾಟೀಸವಾಲುಃ 15 ನೇ ಪರ ವಕೀಲರಾದ ಶ್ರೀ. ಎಮ್ ಎಸ್ ವಕೀಲರಿಂದಃ**

ನನಗೆ 59 ವರ್ಷ ವಯಸ್ಸು. ನಾನು ಹುಟ್ಟಿದ ದಿನಾಂಕ ಎಷ್ಟು ಎಂದು ಕೇಳಿದರೆ, ದಿನಾಂಕವನ್ನು ಬರೆದಿಟ್ಟುರುತ್ತಿರಲಿಲ್ಲ ಆದ್ದರಿಂದ ಹೇಳಲು ಆಗುವುದಿಲ್ಲ. ನಾನು ಸರ್ಕಾರಿ ಶಾಲೆಯಲ್ಲಿ ವಿದ್ಯಾಭ್ಯಾಸಾ ಮಾಡಿದ್ದೇನೆ. ಯಾವ ವರ್ಷದಲ್ಲಿ ಮಾಡಿದ್ದೇನೆ ಎಂದು ಹೇಳಲು

ಗೊತ್ತಿಲ್ಲ. ನನ್ನ ತಂದೆ ವ್ಯವಸಾಯ ಮಾಡುತ್ತಿದ್ದರು, ಅವರಿಗೆ 14 ಎಕರೆ ಜಮೀನು ಇತ್ತು. ನಮ್ಮ ಊರಿನಲ್ಲಿ ಗ್ರಾಮ ಪಂಚಾಯಿತಿ ಇದೆ, ಎಷ್ಟ ವರ್ಷದ ಹಿಂದೆ ಆಗಿದೆ ಎಂದು ಗೊತ್ತಿಲ್ಲ. ನಮ್ಮಲ್ಲಿ ಒಕ್ಕಲಿಗರು ,SCST, ಕುರುಬರು , ಆಚಾರಿ ಜನಾಂಗದವರು ಇದ್ದಾರೆ. 1955 ರಲ್ಲಿ ನಮ್ಮ ಊರಿನಲ್ಲಿ ಎಷ್ಟು ಜನಸಂಖ್ಯೆ ಇತ್ತು ಎಂದು ನನಗೆ ಗೊತ್ತಿಲ್ಲ. ಟ್ರಸ್ಟ ಡೀಡನಲ್ಲಿ 13 ರಿಂದ 14 ಟ್ರಸ್ಟಿಗಳು ಇದ್ದಾರೆ. ಎಲ್ಲಾ ಟ್ರಸ್ಟಿಗಳನ್ನು ಈ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ, ಅರ್ಧ ಜನ 2 ನೇ ಪ್ರತಿವಾದಿ ಕಡೆಗೆ, ಅರ್ಧ ಜನ ನಮ್ಮ ಕಡೆ ಇದ್ದುದರಿಂದ, 2 ನೇ ಪ್ರತಿವಾದಿಯವರ ಕಡೆ ಇದ್ದವರನ್ನು ಮಾಡಿಲ್ಲ. ತಿಪ್ಪೆಗೌಡ, ಸ್ವಾಮಿ, ಹಾಗೂ ಇನ್ನೂ ಸುಮಾರು ಜನರನ್ನು ಪಕ್ಷಗಾರನ್ನಾಗಿ ಮಾಡಿಲ್ಲ , ಅವರ ಹೆಸರುಗಳು ಜ್ಞಾಪಕ ಇಲ್ಲ. ಸ್ವಾಮಿಗೌಡ ಎನ್ನುವವರು ಟ್ರಸ್ಟಿ ಅಲ್ಲ ಎಂದರೆ ನಿಜ. ರಾಮಲಿಂಗೆಗೌಡ ಟ್ರಸ್ಟಿ ಅಲ್ಲ ಎಂದರೆ ನಿಜ. ಕೆಲವೊಂದು ಟ್ರಸ್ಟಿಗಳನ್ನು ಯಾಕೆ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ, ಈಗಾಗಲೇ ಹೇಳಿರುವಂತೆ ಅವರು 2 ನೇ ಪ್ರತಿವಾದಿ ಪರ ಇದ್ದುದರಿಂದ ಮಾಡಿಲ್ಲ. 3 ಮತ್ತು 4 ನೇ ವಾದಿಗಳು ಟ್ರಸ್ಟಿ ಆಗಿಲ್ಲರುವುದರಿಂದ ಈ ಪ್ರಕರಣದಲ್ಲಿ ಅವರಿಗೆ ಯಾವ ಹಿತಾಸಕ್ತಿ ಇದೆ ಎಂದರೆ, ಅವರು ಊರಿನವರು. ಟ್ರಸ್ಟ ಮಾಡಿದನಿಂದಲೂ ಟ್ರಸ್ಟನ ಬಗ್ಗೆ ತಿಳುವಳಿಕೆ ಇದೆ. ಟ್ರಸ್ಟ ಯಾವ ದಿನಾಂಕದಂದು ಆಗಿದೆ ಎಂದು ದಿನಾಂಕ ಮರೆತಿದ್ದೇನೆ. ಟ್ರಸ್ಟ ಮಾಡಲು 2 ನೇ ಪ್ರತಿವಾದಿಯನ್ನು ನಾವು ಕೇಳಿದ್ದೇವೊ ಎಂದರೆ, ನಾವು ಕೇಳಿಲ್ಲ, 2 ನೇ ಪ್ರತಿವಾದಿಯೇ ನಮ್ಮನ್ನು ಕರೆದುಕೊಂಡು ಹೋಗಿ ಟ್ರಸ್ಟ ಮಾಡಿದ್ದಾರೆ. ನಮ್ಮ ಊರಿಲ್ಲಿ ಟ್ರಸ್ಟನ ಬಗ್ಗೆ ಮಿಟಿಂಗ್ ಆಗಿದೆ. misc 8/2012 ರಲ್ಲಿ ಟ್ರಸ್ಟ ನ ಯಾವುದೇ ಮಿಟಿಂಗ್ ನಡೆದಿಲ್ಲ ಎಂದು ಹೇಳಿದ್ದೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಇದ್ದಾಗ 3-4 ಬಾರಿ ಟ್ರಸ್ಟನ ಮಿಟಿಂಗ್ ಆಗಿರುತ್ತದೆ, ನಮ್ಮ ಮತ್ತು ಅವರ ನಡುವಿನ ಹೊಂದಾಣಿಕೆ ಕಡಿಮೆ ಆದ ನಂತರ , ಅವರು ಸ್ವತ್ತು ಮಾರಾಟ

ಮಾಡಿದ ನಂತರ ಮಿಟಿಂಗ್ ಮಾಡಿರುವುದಿಲ್ಲ. 1st ಮಿಟಿಂಗ್ ಯಾವಾಗ ಆಯಿತು ಎಂದು ಗೊತ್ತಿಲ್ಲ. ಕೊನೆಯ ಮಿಟಿಂಗ್ ಯಾವಾಗ ಆಯಿತು ಎಂದು ಗೊತ್ತಿಲ್ಲ. ಯಾವ ಮಿಟಿಂಗ್ ನಲ್ಲಿ ಏನು ತೀರ್ಮಾನ ಆಯಿತು ಎಂದರೆ, ಮೇಲೆ ಹೇಳಿದಂತೆ 3-4 ಮಿಟಿಂಗಳು ಆದಾಗ ಗ್ರಾಮದೇವತೆ ನಾಗಲಿಂಗೇಶ್ವರ , ಹಿರಿದೇವಮ್ಮ ಮತ್ತು ಎಲ್ಲಾ ದೇವರ ಜಾತ್ರೆ ಮಾಡುವುದು, ಹಬ್ಬ ಹರಿದಿನಗಳಂದು ಪೂಜೆ ಮಾಡುವುದರ ಬಗ್ಗೆ ತೀರ್ಮಾನಿಸಲಾಗಿತ್ತು. ಟ್ರಸ್ಟನ ಮಿಟಿಂಗ್ ಮಾಡುವಾಗ ನೋಟೀಸ್ ನೀಡಿಲ್ಲ, ನಾವು ನಾವು ಕರೆದುಕೊಂಡು ಹೋಗುತ್ತಿದ್ದೆವು. ಆ ನಡವಳಿಗಳನ್ನು ನ್ಯಾಯಾಲಯಕ್ಕೆ ನೀಡಿದ್ದೆನೊ ಎಂದರೆ , 2 ನೇ ಪ್ರತಿವಾದಿಯಲ್ಲಿ ಇತ್ತು, ಅವರಿಗ ಅರ್ಜಿ ಕೊಟ್ಟಾಗ ನ್ಯಾಯಾಲಯಕ್ಕೆ ಕೊಟ್ಟಿಲ್ಲ. ಸದರಿ ವಿಷಯವನ್ನು ದಾವೆಯಲ್ಲಿ ಹೇಳಿದ್ದೇನೆ. ಟ್ರಸ್ಟ ಡೀಡನಲ್ಲಿ ಹೇಳಿರುವ ಪ್ರಕಾರ ರೂ. 501/- ನ್ನು ಪ್ರತಿಯೊಬ್ಬರು ನೀಡಿದ್ದೆವೆ. ಟ್ರಸ್ಟ ನೊಂದಣಿ ಆದಾಗಲೇ ಸದರಿ ಹಣವನ್ನು ನೀಡಲಾಗಿದೆ. ಈ ಬಗ್ಗೆ ಬ್ಯಾಂಕ್ ಖಾತೆಯನ್ನು 2 ನೇ ಪ್ರತಿವಾದಿಯವರು ತೆರೆದಿದ್ದಾರೆ. 2 ನೇ ಪ್ರತಿವಾದಿ ಮರಣ ಹೊಂದಿದ ನಂತರ ದಾವಾದಲ್ಲಿ ಅವರ ಬದಲಿಗೆ 1 ನೇ ಪ್ರತಿವಾದಿಯನ್ನು ಪ್ರತಿನಿಧಿಸಲು ಯಾರನ್ನು ಸೇರಿಸಲಾಗಿದೆ ಎಂದರೆ, ಅವರ ಹೆಂಡತಿ ಮತ್ತು ಮಕ್ಕಳನ್ನು ಸೇರಿಸಲಾಗಿದೆ. ಆ ಬಗ್ಗೆ ನಡವಳಿಯಾಗಿದೆ. ಮೂಲ ಟ್ರಸ್ಟನಲ್ಲಿ ಪದಾಧಿಕಾರಿಗಳು ಎಂದು ಯಾರನ್ನು ನೇಮಿಸಲಾಗಿದೆ ಎಂದರೆ, ಪದಾಧಕಾರಿಗಳೆಂದು ನನ್ನನು , ಪುಟ್ಟೆಗೌಡರನ್ನು , ತಿಪ್ಪೆಗೌಡರನ್ನು ಮಾಡಲಾಗಿತ್ತು. ಟ್ರಸ್ಟನಲ್ಲಿ ಪುಟ್ಟೆಗೌಡರವರನ್ನು ಸೆಕ್ರೆಟರಿಯೆಂದು , ತಿಪ್ಪೆಗೌಡರನ್ನು ಉಪಾಧ್ಯಕ್ಷರನ್ನಾಗಿ ನೇಮಿಸಲಾಗಿತ್ತು. ಖಜಾಂಚಿ ಎಂದು ದೊಡ್ಡಲಿಂಗೇಗೌಡರನ್ನು ನೇಮಿಸಲಾಗಿತ್ತು. ಪದಾಧಿಕಾರಿಗಳನ್ನು ನೇಮಿಸಿಲ್ಲ, ಯಾವುದೇ ಮಿಟಿಂಗ್ ಆಗಿಲ್ಲ ಎಂದರೆ ಸುಳ್ಳು. 45-70 ವರ್ಷಗಳಿಂದ ಊರಿನವರು ಸೇರಿ ದೇವಸ್ಥಾನಗಳ ಪೂಜೆ ನಡೆಯಬೇಕೆಂದು ಹೇಳಿ ಪೂಜೆ

ನಡೆಯುತ್ತದೆ. ಇಲ್ಲಿರುವಂತಹ ಕೆಲವೊಂದು ದೇವಸ್ಥಾನಗಳು ಮುಜರಾಯಿ ದೇವಸ್ಥಾನಗಳು ಎಂದರೆ ಸರಿಯಲ್ಲ. ಈ ರೀತಿ ಊರಿನವರು ಸೇರಿ ತೀರ್ಮಾನ ತೆಗೆದುಕೊಂಡು ಪೂಜೆ ಮಾಡುತ್ತಿದ್ದ ಬಗ್ಗೆ ಮಿಟಿಂಗ್ ಆಗಿದೆಯೊ ಎಂದರೆ ಪಂಚಾಯಿತು ಆಗಿತ್ತು. ಪಂಚಾಯಿತಿಯಲ್ಲಿ ಯಾರು ಸದಸ್ಯರು ಇದ್ದರು ಎಂದರೆ, ಊರಿನವರು ಎಲ್ಲರೂ ಒಟ್ಟಾಗಿ ಸೇರಿ ಪಂಚಾಯಿತಿ ಮಾಡುತ್ತಿದ್ದೆವು. ಸದಸ್ಯರ ಹೆಸರುಗಳು ದಾವಾದಲ್ಲಿ ಬಂದಿಲ್ಲ ಎಂದರೆ ನಿಜ. ಟ್ರಸ್ಟ ಬ್ಯಾಂಕಖಾತೆಯಲ್ಲಿ ಎಷ್ಟು ಹಣ ಇದೆ ಎಂದು ಗೊತ್ತಿಲ್ಲ. ಟ್ರಸ್ಟ ಆದ ನಂತರ ದೇವಸ್ಥಾನಕ್ಕೆ ಎಷ್ಟು ಖರ್ಚು ಆಗಿದೆ ಎಂದು ಹೇಳಲು ಸಾಧ್ಯವಿಲ್ಲ. ಈಶ್ವರ ದೇವಸ್ಥಾನದಲ್ಲಿ ಇನ್ನೊಂದು ಟ್ರಸ್ಟ ಆದ ಕುರಿತು ನನಗೆ ಗೊತ್ತಿಲ್ಲ. ಈ ಪ್ರಕರಣದಲ್ಲಿರುವ ಟ್ರಸ್ಟನ ಅಗತ್ಯವಿಲ್ಲ , ಸುಳ್ಳು ದಾವಾ ಹಾಕಿದ್ದೇನೆ ಎಂದರೆ ಸರಿಯಲ್ಲ. ಊರಿನ ಒಳಗಡೆ ಹಳೆ ಮಾರಮ್ಮ ಮತ್ತು ಎಳೆ ಮಾರಮ್ಮ ಎಂಬ ಎರಡು ದೇವಸ್ಥಾನವನ್ನು ಕಟ್ಟಲಾಗಿದೆ, ಈಗ ಮೂಗಮಾರಮ್ಮ ಎಂಬ ದೇವಸ್ಥಾನವನ್ನು ಕಟ್ಟಲು ಪ್ರಾರಂಭಿಸಿದ್ದೇವೆ. ಮೇಲೆ ಹೇಳಿದ 2 ದೇವಸ್ಥಾನಗಳನ್ನು ಕಟ್ಟಿಸಿ 2 ವರ್ಷಗಳಾಗಿವೆ. ಈಗ ತೋರಿಸಿದ ನಿಪಿ. 94 ಟ್ರಸ್ಟ ಡೀಡನ್ನು ನಾನೇ ನ್ಯಾಯಾಲಯಕ್ಕೆ ನೀಡಿದ್ದೇನೆ, ಅದರ ಬಗ್ಗೆ ಬೇರೆ ಎನು ಗೊತ್ತಿಲ್ಲ , ಟ್ರಸ್ಟ ಮಾಡಿದ್ದಾರೆ ಎಂದು ಕೊಟ್ಟಿದ್ದೇನೆ. ನಿಪಿ. 94 ಟ್ರಸ್ಟ ಡೀಡನಲ್ಲಿ ಇರುವವರು ಎಲ್ಲರೂ ನಮ್ಮ ಊರಿನವರೇ ಎಂದರೆ ಸರಿಯಲ್ಲ, ಸ್ವಲ್ಪ ಜನ ನಮ್ಮ ಊರಿನವರು, ಸ್ವಲ್ಪ ಜನ ಬೇರೆ ಊರಿನವರು. ಬೇರೆ ಊರಿನವರು ಯಾವ ಯಾವ ಊರಿನವರು ಎಂದು ಗೊತ್ತಿಲ್ಲ. ನಿಪಿ. 94 ಟ್ರಸ್ಟ ಡೀಡನ ಪ್ರಕಾರ ದೇವಸ್ಥಾನ ಅಭಿವೃದ್ದಿ ಮಾಡುತ್ತಾ ಹೋಗುತ್ತಿದ್ದಾರೆ ಎಂದರೆ ಸುಳ್ಳು. ಈಶ್ವರ ದೇವಸ್ಥಾನದಲ್ಲಿ ವಾರ್ಷಿಕೋತ್ಸವ, ಹಬ್ಬದ ದಿನಗಳಂದು ವಿಶೇಷ ಪೂಜೆಗಳು, ದಿನಾಲೂ ರುಧ್ರಾಭಿಷೇಕ ನಡೆಯುತ್ತದೆ. ಪುಜೆಗೆ ರೂ. 50-60 ಸಾವಿರದಷ್ಟು ಹಣ ಕೊಟ್ಟಿದ್ದೇವೆ, ಗ್ರಾಮಸ್ಥರೆಲ್ಲರೂ ಹಣ ಕೊಟ್ಟಿದ್ದಾರೆ, ಮುಖ್ಯಾ

ಇರುವವರೆಲ್ಲಾ ಹೆಚ್ಚಿನ ಹಣ ಕೊಟ್ಟಿದ್ದಾರೆ. ಆ ರೀತಿ ಹಣ ಒಟ್ಟು ಮಾಡಿದ ಬಗ್ಗೆ ದಾಖಲೆ ಇಲ್ಲ, ಅವರವರೇ ಬಂದು ಹಣ ಕೊಟ್ಟಾಗ ಪೂಜೆಗಳು ನಡೆಯುತ್ತದೆ. ರೂ.50–60 ಸಾವಿರ ಹಣ ನೀಡಿದ್ದೇವೆ ಎಂದು ಹೇಳಿದ ಕುರಿತು ರಶೀದಿಗಳು ಇಲ್ಲ. ದಾವಾ ಸ್ವತ್ತಿನಲ್ಲಿರುವ ಐಟಮ್ ನಂಬರ್ 1 ಯಾವ ದೇವಸ್ಥಾನಕ್ಕೆ ಸೇರಿದ್ದು ಎಂದು ಗೊತ್ತಿಲ್ಲ. ಐಟಮ್ ನಂ. 1 ರಲ್ಲಿ 22 ಗುಂಟೆ ಜಮೀನನ್ನು ರಿಂಗ್ ರಸ್ತೆಗೆ ತೆಗೆದುಕೊಳ್ಳಲಾಗಿದೆ. ಐಟಮ್ ನಂ. 1 ರಲ್ಲಿ ಒಟ್ಟು 3 ಎಕರೆ 15 ಗುಂಟೆ ಇತ್ತು. ಅಂದಾಜು 20 ಗುಂಟೆ ರಿಂಗ್ ರಸ್ತೆಗೆ ತೆಗೆದುಕೊಳ್ಳಲಾಯಿತು. ಎಷ್ಟು ಜಮೀನನ್ನು ಸರ್ಕಾರ ವಶಕ್ಕೆ ತೆಗೆದುಕೊಂಡಿದೆ ಎಂಬ ಬಗ್ಗೆ ನನಗೆ ನಿಖರವಾದ ಮಾಹಿತಿ ಇಲ್ಲ, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಸ್ವತ್ತುಗಳು ಟ್ರಸ್ಟನ ಸ್ವತ್ತುಗಳಲ್ಲ ಎಂದರೆ ಸರಿಯಲ್ಲ. ದಾವಾಸ್ವತ್ತುಗಳು ಟ್ರಸ್ಟನಲ್ಲಿ ಇಲ್ಲ ಎಂದರೆ ಸರಿಯಲ್ಲ. ಟೈಟಲ್ ಮತ್ತು ಸ್ವಾಧೀನಕ್ಕಾಗಿ ಬೇರೆ ದಾವೆ ಸಲ್ಲಿಸುವುದಾಗಿ ನನ್ನ ದಾವಾ ಪತ್ರದಲ್ಲಿ ಮತ್ತು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹೇಳಿದ್ದೇನೆ ಆದರೆ ಆ ಬಗ್ಗೆ ಟ್ರಸ್ಟ ಡೀಡನಲ್ಲಿ ನಮೂದು ಇಲ್ಲ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಗೆ ಮತ್ತು ದಾವಾ ಸ್ವತ್ತು ಖರೀದಿ ಮಾಡಿದ ವ್ಯಕ್ತಿಗಳಿಗೆ ಮೋಸ ಮಾಡಲು , ಬ್ಲ್ಯಾಕ್ ಮೇಲೆ ಮಾಡಲು ಈ ದಾವೆ ಸಲ್ಲಿಸಿದ್ದೇನೆ ಎಂದರೆ ಸುಳ್ಳು.

**ಪಾಟೀಸವಾಲುಃ ಪ್ರತಿವಾದಿ–16 and 17 (a to d) ಪರ ವಕೀಲರಾದ ಶ್ರಿ. ಎಸ್ ಪಿ ವಕೀಲರಿಂದಃ**

1. ನಾನು 7 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ಕನ್ನಡ ಓದಲು ಬರೆಯಲು ಸ್ವಲ್ಪ ಸ್ವಲ್ಪ ಬರುತ್ತದೆ. ಈಗ ತೋರಿಸಿದ Misc 8/2012 ಅರ್ಜಿಯಲ್ಲಿ ನನ್ನ ಸಹಿ ಇದೆ ಅದು ಇಂಗ್ಲೀಷ್ ನಲ್ಲಿ ಇದೆ ಎಂದರೆ ,ನಿಜ. Misc 8/2012 ರಲ್ಲಿ ಮುಖ್ಯ ವಿಚಾರಣಾ ಪ್ರಮಾಣ

ಪತ್ರವನ್ನು ಸಲ್ಲಿಸಿದ್ದೇನೆ. ಹಾಗೇಯೇ Misc 8/2012 ರಲ್ಲಿ ಉಳಿದ ಎದುರುದಾರರು ನನ್ನನ್ನು ಪಾಟೀಸವಾಲು ಮಾಡಿದ್ದಾರೆ ಎಂದರೆ ನಿಜ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹೇಳಿದಂತ ಹಿರಿಯದೇವಮ್ಮನ ದೇವಸ್ಥಾನ , ನಾಗಲಿಂಗಮ್ಮನ ದೇವಸ್ಥಾನ , ಹಳೇ ಬೋಗಾದಿ ಮಾರಮ್ಮನ ದೇವಸ್ಥಾನ , ಮೂಗ ಮಾರಮ್ಮನ ದೇವಸ್ಥಾನ, ಕಂಚಿನ ಕೋಟೆ ಮಾರಮ್ಮನ ದೇವಸ್ಥಾನ, ಬಂದಿತಮ್ಮನ ದೇವಸ್ಥಾನ , ಸಿದ್ದಪ್ಪಾಜಿ ದೇವಸ್ಥಾನ, ರಾಚಪ್ಪಾಜಿ ದೇವಸ್ಥಾನ, ಶ್ರೀರಾಮಂದಿರ , ಸುಬ್ರಹ್ಮಣ್ಯೇಶ್ವರ ದೇವಸ್ಥಾನ, ಗಣಪತಿ ದೇವಸ್ಥಾನ, ಚಾಮುಂಡೇಶ್ವರಿ ದೇವಸ್ಥಾನ, ಬಸವೇಶ್ವರ ದೇವಸ್ಥಾನಗಳು ಬೋಗಾದಿ ಗ್ರಾಮಗಳು ಇವೆ ಎಂದು ಹೇಳಿದ ಬಗ್ಗೆ ದಾಖಲಾತಿಯನ್ನು ಕೊಟ್ಟಿರಬೇಕು, ಕೊಟ್ಟಿದ್ದಾರೆ. ಸದರಿ ದೇವಸ್ಥಾನಗಳ ಉಸ್ತುವಾರಿಯನ್ನು ನಾನು ಮತ್ತು ಗ್ರಾಮಸ್ಥರು ನಡೆಸುತ್ತಿದ್ದೇವೆ ಎಂದು ತೋರಿಸಲು ದಾಖಲೆಯನ್ನು ಕೊಟ್ಟಿದ್ದೇನೆ. ಈ ಮೇಲೆ ಹೇಳಿದಂತಹ ದೇವಸ್ಥಾನದಿಂದ ಬಂದಂತಹ ಆದಾಯ ಮತ್ತು ಖರ್ಚು ವೆಚ್ಚಗಳ ಬಗ್ಗೆ ವಿವರವನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ದೇವಸ್ಥಾನದಿಂದ ಬಂದಂತಹ ಆದಾಯ ಮತ್ತು ಖರ್ಚು ವೆಚ್ಚಗಳ ಆಡಿಟ್ ರಿಪೋರ್ಟನ್ನು ನ್ಯಾಯಾಲಯಕ್ಕೆ ಕೊಟ್ಟಿರಬಹುದು. ದಾವಾ ಸ್ವತ್ತು 2012 ರಲ್ಲಿ ಮೇಲೆ ಹೇಳಿದ ದೇವಸ್ಥಾನಗಳ ಸ್ವತ್ತಾಗಿತ್ತು ಎಂದು ತೋರಿಸಲು ದಾಖಲಾತಿಯನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ಸದರಿ ದೇವಸ್ಥಾನಗಳಲ್ಲಿರುವ ದೇವರಿಗೆ ಸಂಬಂಧಪಟ್ಟಂತೆ ಚಿನ್ನ ಬೆಳ್ಳಿ ಇದೆಯೋ ಎಂದರೆ, ಮುಖವಾಡ ಇದೆ. ಪೂಜಾ ಸಾಮಗ್ರಿ ಇದೆಯೊ ಎಂದರೆ , ತಟ್ಟೆ ಇದೆ , ಹಾಗೇಯೆ ಗಂಟೆ ಆರತಿ ತಟ್ಟೆ ಇದೆ. ಸದರಿ ವಿಷಯವನ್ನು ನನ್ನ ಅರ್ಜಿಯಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ದೇವಸ್ಥಾನಕ್ಕೆ ಸಂಬಂಧಪಟ್ಟಂತಹ ಚರಸ್ವತ್ತಿನ ಪಟ್ಟಿಯನ್ನು ಮಾಡಿ ನ್ಯಾಯಾಲಯಕ್ಕೆ ನೀಡಿದ್ದೇನೆ. ದೇವಸ್ಥಾನದ ಚರಸ್ವತ್ತುಗಳು ಯಾರ ಸ್ವಾಧೀನದಲ್ಲಿ ಇರುತ್ತದೆ , ಎಲ್ಲಿಂದ , ಯಾವ

ಸಂದರ್ಭದಲ್ಲಿ ದೇವಸ್ಥಾನಕ್ಕೆ ತರುತ್ತಾರೆ ಎಂಬ ಟ್ರಸ್ಟನ ನಡುವಳಿಯನ್ನು ನ್ಯಾಯಾಲಯಕ್ಕೆ ನೀಡಿದ್ದೇನೆ. ಈ ಟ್ರಸ್ಟ ಯಾವಾಗ ನೊಂದಣಿ ಆಯಿತೋ ಅಂದೆ ನಾನು ಸದರಿ ಟ್ರಸ್ಟನ ಒಬ್ಬ ಟ್ರಸ್ಟಿಯಾಗಿದ್ದೆ ಎಂದರೆ , ನಿಜ. ಟ್ರಸ್ಟನ ಎಲ್ಲ ನಡವಳಿಗಳು ನನ್ನ ಗಮನಕ್ಕೆ ಬಂದಿರುತ್ತದೆ, ನಾನು ಟ್ರಸ್ಟನ ಎಲ್ಲ ನಡವಳಿಗಳಲ್ಲಿ ಭಾಗವಹಿಸಿ ಅದಕ್ಕೆ ಸಹಿ ಮಾಡಿರುತ್ತೇನೆ. ಸದರಿ ಟ್ರಸ್ಟನ ನಡವಳಿ ವಹಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೇನಾದರೂ ತೊಂದರೆ ಇದೆಯೋ ಎಂದರೆ , ಸದರಿ ನಡವಳಿಯ ವಹಿಗಳು 2 ನೇ ಪ್ರತಿವಾದಿಯಲ್ಲಿ ಇತ್ತು, ಆದ್ದರಿಂದ ನಾನು ಹಾಜರುಪಡಿಸಲು ಸಾಧ್ಯವಾಗಿಲ್ಲ. 2012 ರ ನಂತರ 2 ನೇ ಪ್ರತಿವಾದಿ ಸದರಿ ನಡವಳಿ ವಹಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬೇಕೆಂದು ಕೊರ್ಟಗೆ ಅರ್ಜಿ ಸಲ್ಲಿಸಿದ್ದೇನೆ. ಯಾವ ದಿನಾಂಕದಂದು ಅರ್ಜಿ ಸಲ್ಲಿಸಿದ್ದೇನೆ ಎಂದು ಹೇಳಲು ಸಾಧ್ಯವಾಗುವುದಿಲ್ಲ. ಈ ಮೇಲೆ ಹೇಳಿದ ದೇವಸ್ಥಾನಗಳಿಗೆ ಅರ್ಚಕರು , ಸಹಾಯಕರು ಮತ್ತು ಕಾವಲುಗಾರರನ್ನು ನೇಮಿಸಿದ್ದೇವೊ ಎಂದರೆ, ಅರ್ಚಕರನ್ನು ಗ್ರಾಮದವರು ನೇಮಿಸಿದ್ದೇವೆ. ಆ ರೀತಿ ನೇಮಿಸಿದ ಅರ್ಚಕರಿಗೆ ನೀಡಿದ ವೇತನದ ವಿವರವನ್ನು ನ್ಯಾಯಾಲಯಕ್ಕೆ ನೀಡಿದ್ದೇವೊ ಎಂದರೆ , 2 ನೇ ಪ್ರತಿವಾದಿ ಟ್ರಸ್ಟನ ಅಧ್ಯಕ್ಷರಾಗಿದ್ದರು, ಅವರಲ್ಲಿ ಹಣ ಕೊಡುತ್ತಿದ್ದೆವು. ಟ್ರಸ್ಟನ ಎಲ್ಲಾ ಮೀಟಿಂಗ್ ಗಳಿಗೆ ನಾನು ಹಾಜರಾಗುತ್ತಿದ್ದೆ. ಟ್ರಸ್ಟನ ಬ್ಯಾಂಕ ಖಾತೆ ಯಾವ ಬ್ಯಾಂಕನಲ್ಲಿ ಇತ್ತು ಎಂದರೆ, ಗ್ರಾಮೀಣ ಬ್ಯಾಂಕ್ ಬೋಗಾದಿಯಲ್ಲಿ ಇತ್ತು. ಸದರಿ ಬ್ಯಾಂಕನಲ್ಲಿ ಇರುವ ಟ್ರಸ್ಟನ ಖಾತೆಯ ಸ್ಟೇಟಮೆಂಟ್ ನ್ನು ನ್ಯಾಯಾಲಯಕ್ಕೆ ನೀಡಬೇಕೆಂದು ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿಲ್ಲ. 13 ರಿಂದ 18 ನೇ ಪ್ರತಿವಾದಿಯವರು 2 ನೇ ಪ್ರತಿವಾದಿಯಿಂದ ದಾವಾಸ್ವತ್ತನ್ನು ಖರೀದಿಸಿರುವುದು ಅಸಿಂಧು ಎಂದು ಘೋಷಣೆ ಕೋರಿ ನ್ಯಾಯಾಲಯಕ್ಕೆ ದಾವೆ ಸಲ್ಲಿಸಿದ್ದೇನೆ. ಅದಕ್ಕೆ ಸಂಬಂಧಿಸಿದ ಕೋರ್ಟಿನ ಶುಲ್ಕ ಕಟ್ಟಿದ್ದೇನೆ. 2 ನೇ ಪ್ರತಿವಾದಿಯಿಂದ ದಾವಾಸ್ವತ್ತನ್ನು

ಖರೀದಿ ಮಾಡಿದ 13 ನೇ 18 ನೇ ಪ್ರತಿವಾದಿಗಳು ಆಯಾ ಸ್ವತ್ತುಗಳಲ್ಲಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ, ಗ್ರಾಮಸ್ಥರು ಸ್ವಾಧೀನದಲ್ಲಿ ಇದ್ದಾರೆ. ಆ ರೀತಿ ಗ್ರಾಮಸ್ಥರು ದಾವಾಸ್ವತ್ತಿನ ಸ್ವಾಧೀನದಲ್ಲಿ ಇದ್ದಾರೆ ಎಂಬ ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ. 16 ನೇ ಪ್ರತಿವಾದಿಯವರು ದಾವಾಸ್ವತ್ತಿನ ಸರ್ವೇ ನಂ. 228/2 ರಲ್ಲಿ 2 ಎಕರೆ 2 ಗುಂಟೆಯನ್ನು ಜಮೀನನ್ನು 2 ನೇ ಪ್ರತಿವಾದಿಯಿಂದ ಖರೀದಿ ಮಾಡಿದ್ದಾರೆ ಎಂದು ಕ್ರಯಪತ್ರ ನಿಪಿ. 38 ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ ಎಂದರೆ ನಿಜ. 17 ನೇ ಪ್ರತಿವಾದಿಯವರು ದಾವಾಸ್ವತ್ತಿನ ಸರ್ವೇ ನಂ. 228/2 ರಲ್ಲಿ 1 ಎಕರೆ ಜಮೀನನ್ನು 2 ನೇ ಪ್ರತಿವಾದಿಯಿಂದ ಖರೀದಿ ಮಾಡಿದ್ದಾರೆ ಎಂದು ಕ್ರಯಪತ್ರ ನಿಪಿ. 37 ಮತ್ತು 39 ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ ಎಂದರೆ ನಿಜ. ಹಾಗೇಯೇ ದಾವಾಸ್ವತ್ತಿನ ಉಳಿದ ಜಮೀನುಗಳಿಗೆ ಸಂಬಂಧಿಸಿದ ಕ್ರಯಪತ್ರಗಳನ್ನು ಕೂಡ ಹಾಜರುಪಡಿಸಿದ್ದೇನೆ. ಈ ಕ್ರಯಪತ್ರಗಳಾದ ನಿಪಿ.37 ರಿಂದ 43 ರವರೆಗಿನ ಕ್ರಯಪತ್ರಗಳಲ್ಲಿ ಸದರಿ ಸ್ವತ್ತುಗಳ ಸ್ವಾಧೀನವನ್ನು ನೊಂದಣಿ ದಿನಾಂಕದಿಂದ ಖರೀದಿ ಮಾಡಿದ ವ್ಯಕ್ತಿಗೆ ಹಸ್ತಾಂತರಿಸಲಾಗಿದೆ ಎಂಬ ಒಕ್ಕಣೆ ಇದೆ ಎಂದರೆ, ಬರೆದಿದೆ ಆದರೆ ಸ್ವಾಧೀನವು ನಮ್ಮ ವಶದಲ್ಲಿ ಇದೆ. ನಿಪಿ. 30 ಟ್ರಸ್ಟ ಡೀಡ ನಾನು ಹಾಜರುಪಡಿಸಿದ ಟ್ರಸ್ಟ ಡೀಡ ಆಗಿದೆ. ನಿಪಿ. 30 ರ 2 ನೇ ಪುಟದಲ್ಲಿ ಟ್ರಸ್ಟನ ರಿಜಿಸ್ಟರ ಕಚೇರಿ "ಬೋಗಾದಿ ಗ್ರಾಮದಲ್ಲಿ ಮುಂದೆ ಸೂಚಿಸಬೇಕಾದ ಸ್ಥಳದಲ್ಲಿ ಇರತಕ್ಕದು" ಎಂಬ ಒಕ್ಕಣೆ ಇದೆ ಎಂದರೆ ನಿಜ. ಹಾಗೇಯೇ ನಿಪಿ. 30 ರ 3 ನೇ ಪುಟದಲ್ಲಿ 5 ನೇ ಸಿರಿಯಲ್ ನಂಬರನಲ್ಲಿ ನನ್ನ ಹೆಸರು , ವಯಸ್ಸು , ತಂದೆಯ ಹೆಸರು ಮತ್ತು ಟ್ರಸ್ಟಿ ಎಂದು ನಮೂದು ಇದೆ ಎಂದರೆ ನಿಜ. ನಿಪಿ. 30 ರ 4 ನೇ ಪುಟದಲ್ಲಿ ಪ್ರತಿಯೊಬ್ಬ ಟ್ರಸ್ಟಿಯೂ ರೂ. 501/- ನ್ನು ಟ್ರಸ್ಟನ ಮೂಲಧನವಾಗಿ ಕೊಡಬೇಕೆಂದು ಇದೆ ಎಂದರೆ ನಿಜ. ಅದೇರೀತಿಯಾಗಿ 13 ಜನ ಟ್ರಸ್ಟಿಗಳು

ತಲಾ ರೂ. 501/- ನ್ನು ನೀಡಿದ ಬಗ್ಗೆ ದಾಖಾಲಾತಿ ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೊ ಎಂದರೆ, ನಾವು 2 ನೇ ಪ್ರತಿವಾದಿಗೆ ನೀಡಿದ್ದೇವೆ , ಅವರು ದಾಖಲಾತಿಯನ್ನು ನೀಡಬೇಕು. ಆ ರೀತಿ ರೂ. 501/- ನ್ನು ನೀಡಿದ ಕುರಿತು ರಶೀದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ಈ ಟ್ರಸ್ಟ ಡೀಡನಲ್ಲಿ 3 ವರ್ಷಕ್ಕೊಮ್ಮೆ ಚುಣಾವಣೆಯಾಗಿ ಪದಾಧಿಕಾರಿಗಳ ನೇಮಕ ಆಗಬೇಕೆಂದು ಇದೆ ಎಂದರೆ ನಿಜ. ಆ ರೀತಿ ಚುಣಾವಣೆಗಳು ನಡೆದಿವೆಯೋ ಎಂದರೆ , 2 ನೇ ಪ್ರತಿವಾದಿ ಮತ್ತು ನಮಗೆ ಹೊಂದಾಣಿಕೆ ಇರಲಿಲ್ಲ ಆದ್ದರಿಂದ ಚುಣಾವಣೆಗಳು ನಡೆದಿಲ್ಲ. ಟ್ರಸ್ಟ ಪ್ರಾರಂಭವಾದಾಗಿನಿಂದಲೂ ಟ್ರಸ್ಟನಲ್ಲಿರುವ ಯಾವುದೇ ಕ್ರಮಗಳನ್ನು ನಡೆಸಿಲ್ಲವಾದ್ದರಿಂದ ಟ್ರಸ್ಟ ಅಸ್ತಿತ್ವಕ್ಕೆ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಟ್ರಸ್ಟಗೆ ಯಾವ ಯಾವ ಆಸ್ತಿಗಳು ಸೇರಿವೆ ಎಂದು ಟ್ರಸ್ಟ ಡೀಡನಲ್ಲಿ ಬರೆಯಲಾಗಿದೆ. ನಿಪಿ. 30 ರ 5 ನೇ ಪುಟದಲ್ಲಿ ಗ್ರಾಮದ 300 ಜನರನ್ನು ಸದರಿ ಟ್ರಸ್ಟಗೆ ಸದಸ್ಯರನ್ನಾಗಿ ನೇಮಕ ಮಾಡಲಾಗುವುದು ಎಂಬ ಕುರಿತು 300 ಜನರ ಹೆಸರಿನ ಪಟ್ಟಿಯನ್ನು ಕೊಟ್ಟಿದ್ದಿರೋ ಎಂದರೆ, 300 ಜನರನ್ನು ಸದಸ್ಯರನ್ನಾಗಿ ಸೇರಿಸಿಲ್ಲ ಮತ್ತು ಪಟ್ಟಿಯನ್ನು ಕೊಟ್ಟಿಲ್ಲ. ನಿಪಿ. 30 ರಲ್ಲಿ ಬೈ ಲಾ ವನ್ನು ಮಾಡಲು ಟ್ರಸ್ಟೀಗಳಿಗೆ ಅಧಿಕಾರವಿದೆ ಎಂಬ ಕುರಿತು ಬೈ ಲಾ ಮಾಡಿದ್ದೀರಾ ಎಂದರೆ, ಇಲ್ಲ. ದಾವಾಸ್ವತ್ತುಗಳನ್ನು 2 ನೇ ಪ್ರತಿವಾದಿ ಯಾರು ಯಾರಿಗೆ ಮಾರಾಟ ಮಾಡಿದ್ದಾರೆ ಎಂಬ ವಿವರ ನನಗೆ ಗೊತ್ತಿದೆ. 2 ನೇ ಪ್ರತಿವಾದಿ ಯಾರು ಯಾರಿಗೆ ದಾವಾಸ್ವತ್ತುಗಳನ್ನು ಮಾರಾಟ ಮಾಡಿದ್ದಾರೋ ಅವರುಗಳೆಲ್ಲರನ್ನು ಈ ಕೇಸಿನಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ, 2 ನೇ ಪ್ರತಿವಾದಿ ಮೊದಲಿಗೆ ಯಾರಿಗೆ ಮಾರಾಟ ಮಾಡಿದ್ದಾರೊ ಅವರನ್ನು ಈ ಪ್ರಕರಣದಲ್ಲಿ ಸೇರಿಸಿದ್ದೇವೆ, 2 ನೇ ಬಾರಿ ಕ್ರಯಪತ್ರವಾಗಿ ಖರೀದಿ ಮಾಡಿದ ವ್ಯಕ್ತಿಗಳ ವಿವರವನ್ನು ಮತ್ತು ಅವರುಗಳನನ್ನು ಪ್ರತಿವಾದಿಗಳನ್ನಾಗಿ ಪ್ರಕರಣದಲ್ಲಿ ಮಾಡಿಲ್ಲ. ನಾನು ಹಾಕಿದ ವಾದ ಪತ್ರ ಮತ್ತು ನಿಶಾನೆಯಾದ

ದಾಖಲಾತಿಗಳು ವ್ಯತಿರಿಕ್ತವಾಗಿವೆ ಎಂದರೆ ಸರಿಯಲ್ಲ. ದಾವಾಸ್ವತ್ತುಗಳು ಯಾವುವು ಕೂಡ ಗ್ರಾಮದ ಆಸ್ತಿಯಲ್ಲ, ದೇವಸ್ಥಾನದ ಆಸ್ತಿಯಲ್ಲ, ದುರ್ಲಾಬ ಪಡೆಯಲು ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ನಾವು ಮಾಡಿರುವ ಟ್ರಸ್ಟ ಡೀಡ ಅಸ್ತಿತ್ವಕ್ಕೆ ಬಂದಿರುವುದಿಲ್ಲ ಎಂದರೆ ಸುಳ್ಳು. ದಾವಾ ಸ್ವತ್ತು 2 ನೇ ಪ್ರತಿವಾದಿಗೆ ಸೇರಿದ ಸ್ವತ್ತು ಎಂದು ಗೊತ್ತಿದ್ದರೂ ಕೂಡ, ದೇವಸ್ಥಾನದ ಸ್ವತ್ತು ಎಂದು ಸುಳ್ಳು ದಾಖಲೆ ಸೃಷ್ಟಿಸಿ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ** 13 ನೇ ಪ್ರತಿವಾದಿಯವರು 16 ನೇ ಪ್ರತಿವಾದಿಯವರು ಮಾಡಿದ ಪಾಟೀಸವಾಲನ್ನು ಅಳವಡಿಸಿಕೊಳ್ಳಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.

**ಪಾಟೀಸವಾಲುಃ 18 ನೇ ಪ್ರತಿವಾದಿ ಪರ ವಕೀಲರಾದ ಶ್ರೀ. ಎನ್ ಎಲ್ ಎನ್ ವಕೀಲರಿಂದಃ**

1. ಸರ್ವೇ ನಂಬರ್ 228/2 ರಲ್ಲಿ 5 ಎಕರೆ 31 ಗುಂಟೆ ಜಮೀನನ್ನು 2 ನೇ ಪ್ರತಿವಾದಿಗೆ ಗ್ರ್ಯಾಂಟ್ ಆದ ನಂತರ ಆರ್ ಟಿ ಸಿ ಅವರ ಹೆಸರಿಗೆ ಆಗಿದೆ ಎಂದರೆ ನಿಜ. 31.05.2008 ರಲ್ಲಿ 20 ಗುಂಟೆ ಜಮೀನನ್ನು 2 ನೇ ಪ್ರತಿವಾದಿ ದ್ವಾರಕೀಶ್ ಎನ್ನುವವರಿಗೆ ಮಾರಾಟ ಮಾಡಲಾಗಿದೆ ಎಂದರೆ ನಿಜ. ದಿಃ 02.09.2010 ರಲ್ಲಿ ಸದರಿ ದ್ವಾರಕೀಶ್, ಅದರಲ್ಲಿ 10 ಗುಂಟೆ ಜಮೀನನ್ನು 18 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ, ಗಮನಕ್ಕೆ ಬಂದಮೇಲೆ ಅವರನ್ನು ಪಕ್ಷಗಾರರನ್ನಾಗಿ ಮಾಡಿದ್ದೇನೆ. ಅದೇ ಪ್ರಕಾರ ಆರ್ ಟಿ ಸಿಯು 18 ನೇ ಪ್ರತಿವಾದಿಯ ಹೆಸರಿಗೆ ಸರ್ವೇ ನಂ. 228/19 , 10 ಗುಂಟೆಗೆ ಎಂದು ಬಂದಿದೆ ಎಂದರೆ ನಿಜ. ಅದೇ ಪ್ರಕಾರ 18 ನೇ ಪ್ರತಿವಾದಿ ಸದರಿ ಜಮೀನಿನ ಮಾಲೀಕತ್ವವನ್ನು ಹೊಂದಿ ಅನುಭವದಲ್ಲಿ ಇದ್ದಾರೆ ಎಂದರೆ, ಮಾಲೀಕತ್ವ ಅವರ

ಅಧೀನಲ್ಲಿದ್ದು ಸ್ವಾಧೀನ ಗ್ರಾಮಸ್ಥರಲ್ಲಿ ಇದೆ. ಸದರಿ ಜಮೀನಿನ ಸ್ವಾಧೀನ ನಮ್ಮ ಅಧೀನದಲ್ಲಿ ಇದೆ ಎಂದು ಹೇಳಲು ದಾಖಲಾತಿಯನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ಐಟಮ್ ನಂಬರ್ 4 ರಲ್ಲಿ ದಾವಾ ಷೇಡ್ಯೂಲ್ ಸಂಖ್ಯೆ 4 ರಲ್ಲಿ 18 ನೇ ಪ್ರತಿವಾದಿಗೆ ಹೊರತುಪಡಿಸಿದರೆ , ಬೇರೆ ಯಾರಿಗೂ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಎ ಒ.,

(ಉಷಾ ರಾಣಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.